## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\114\2016\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 20/10/2016

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸಾರ್ವಜನಿಕ/ ಸರ್ಕಾರಿ ನೌಕರರಾದ ಶಿವಮೊಗ್ಗ ಜಿಲ್ಲೆ ಮತ್ತು ತಾಲ್ಲೂಕಿನ ತಹಶೀಲ್ದಾರ್ ಶ್ರೀ.ರಾಜಗೋಪಾಲ್ ರವರು ಕರ್ತವ್ಯ ಲೋಪ/ದುರ್ವರ್ತನೆ ಎಸಗಿರುವ ಬಗ್ಗೆ.

*******

ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಕ್ರಾಸ್ ಬೀರನಹಳ್ಳಿ ಕ್ರಾಸ್ ಬೆಳಗಲು ಗ್ರಾಮದ ಶ್ರೀ.ವೈ.ಆರ್.ನರೇಂದ್ರಬಾಬು ಬಿನ್ ರಾಮಕೃಷ್ಣೇಗೌಡ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶಿವಮೊಗ್ಗ ಜಿಲ್ಲೆ ಮತ್ತು ತಾಲ್ಲೂಕಿನ ತಹಶೀಲ್ದಾರ್ ಶ್ರೀ.ರಾಜಗೋಪಾಲ್ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಶಿವಮೊಗ್ಗ ತಾಲ್ಲೂಕ್ ಬೆಳಗಲು ಗ್ರಾಮದಲ್ಲಿ ದೂರುದಾರರ ತಂದೆಯವರಿಗೆ ಪಿತ್ರಾರ್ಜಿತವಾಗಿ ಬಂದಂತಹ ಸರ್ವೆ ನಂ.136, 137, 138ರಲ್ಲಿ ತಲಾ 2 ಎಕರೆಯಂತೆ ಒಟ್ಟು 6 ಎಕರೆ ತೋಟವಿದ್ದು, ದೂರುದಾರರ ತಂದೆಯ ಮರಣಾನಂತರ ಎದುರುದಾರರು ಸದರಿ ಆಸ್ತಿಯ ಖಾತೆಗಳನ್ನು ಮೇಲಾಧಿಕಾರಿಗಳ ಆದೇಶವಿಲ್ಲದೆ ಬಾರಿ ಪ್ರಮಾಣದ ಹಣ ಪಡೆದು ಬದಲಾಯಿಸಿ ತನಗೆ ಮೋಸ ಮಾಡಿರುವುದಾಗಿ ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ವರದಿಯನ್ನು ಕೇಳಲಾಗಿ, ಎದುರುದಾರರು ತಮ್ಮ ಪತ್ರದಲ್ಲಿ –

ಬೆಳಗಲು ಗ್ರಾಮದ ಸರ್ವೆ ನಂ.136, 137, 138ರ ಬಗ್ಗೆ ಶ್ರೀಮತಿ.ಚೆನ್ನಮ್ಮ ಕೋಂ ಲೇ.ರಾಮಕೃಷ್ಣೇಗೌಡ ರವರಿಗೆ ಎಂಆರ್‌ಹೆಚ್.6/2013-14ರಂತೆ ಅವರ ಪತಿ ಶ್ರೀ.ಎನ್.ರಾಮಕೃಷ್ಣೇಗೌಡ ಮೃತಪಟ್ಟ ನಂತರ ಹಕ್ಕು ಬಂದಿದೆ. ಆ ನಂತರ, ಸದರಿ ಎಂಆರ್‌ಹೆಚ್ 6/2013-14ನ್ನು ದೂರುದಾರರು

ಶಿವಮೊಗ್ಗ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ:ಪಿಡಿಎ.177/2013–14ರಂತೆ ಪ್ರಶ್ನಿಸಿದ್ದು, ದಿ:05/08/14ರಂದು ಹಾಗೂ ತಿದ್ದುಪಡಿ ಆದೇಶ ದಿ:08/09/14ರಂತೆ ಶ್ರೀಮತಿ.ಚೆನ್ನಮ್ಮ ಕೋಂ ಲೇ.ರಾಮಕೃಷ್ಣೇಗೌಡ ರವರ ಜೊತೆಗೆ ದೂರುದಾರರು ಶ್ರೀಮತಿ.ವೈ.ಆರ್.ಸುನೀತಾ ಕೋಂ ಹೆಚ್.ಎಸ್.ಬಾಲರಾಜ್ ರವರ ಹೆಸರಿಗೆ ಜಂಟಿ ಖಾತೆ ದಾಖಲಿಸಲು ಆದೇಶಿಸಿದ್ದು, ಅದರಂತೆ ತಮ್ಮ ಕಛೇರಿಯಲ್ಲಿ ಎಂಆರ್‌ಹೆಚ್.5/2014–15ರಂತೆ ದಿ:15/09/14ರಂದು ಮ್ಯುಟೇಷನ್ ಅಂಗೀಕೃತವಾಗಿದೆ. ಶಿವಮೊಗ್ಗ ಉಪವಿಭಾಗಾಧಿಕಾರಿಗಳ ಆದೇಶವನ್ನು ಶಿವಮೊಗ್ಗ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಶ್ರೀಮತಿ.ಚೆನ್ನಮ್ಮರವರು ಪ್ರಶ್ನಿಸಿದ್ದು, ಅದರಂತೆ ಪ್ರಕರಣ ಸಂಖ್ಯೆ:ಆರ್‌ಎಂಐಎಸ್‌ಸಿ 17/2014–15ರಲ್ಲಿ ದಿ:03/09/14ರಂದು ತಡೆಯಾಜ್ಞೆ ನೀಡಿದ್ದಾರೆ. ಆ ನಂತರ, ತಮ್ಮ ಕಛೇರಿಯಿಂದ ಮಾನ್ಯ ಉಪವಿಭಾಗಾಧಿಕಾರಿಗಳು, ಶಿವಮೊಗ್ಗ ರವರಿಗೆ ಪಿಡಿಎ 177/13–14ರಂತೆ ದಿ:05/08/14ರಂದು ಆಗಿರುವ ಆದೇಶಕ್ಕೆ ಎಂಆರ್‌ಹೆಚ್.5/2014–15ನ್ನು ವಜಾಗೊಳಿಸಲು ಹಾಗೂ ಸದರಿ ಮ್ಯುಟೇಷನ್‌ಗಿಂತ ಮೊದಲಿದ್ದ ಶ್ರೀಮತಿ.ಚೆನ್ನಮ್ಮ ಕೋಂ ಲೇ.ರಾಮಕೃಷ್ಣೇಗೌಡ ರವರ ಹೆಸರಿಗೆ ಮಾತ್ರ ಪಹಣಿ ನಮೂದಿಸಲು ಹಾಗೂ ಸದರಿ ಪಹಣಿಗಳ ಕಾಲಂ ನಂ.11ರಲ್ಲಿ ಶಿವಮೊಗ್ಗ ಜಿಲ್ಲಾಧಿಕಾರಿಯವರ ತಡೆಯಾಜ್ಞೆ ಇರುತ್ತದೆಂದು ನಮೂದಿಸಲು ಆದೇಶ ಕೋರಿ ಪತ್ರ ಬರೆದಿದ್ದು, ಸದರಿಯವರು ಜಿಲ್ಲಾಧಿಕಾರಿಗಳ ಆದೇಶದನ್ವಯ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದು, ಅದರಂತೆ ತಮ್ಮ ಕಛೇರಿ ಪ್ರಕರಣ ಸಂಖ್ಯೆ:ಆರ್‌ಆರ್‌ಟಿ–ಡಿಐಎಸ್, ಸಿಆರ್ 25/14–15ರಂತೆ ಆದೇಶ ಹೊರಡಿಸಿದ್ದು, ಪಹಣಿ ಕಾಲಂ 9 ಮತ್ತು 12ರಲ್ಲಿ ಜಂಟಿ ಇರುವ ಶ್ರೀಮತಿ.ಚೆನ್ನಮ್ಮ, ದೂರುದಾರರು ಹಾಗೂ ಶ್ರೀಮತಿ.ಸುನೀತಾ ರವರ ಹೆಸರನ್ನು ತೆಗೆದು ಶ್ರೀಮತಿ.ಚೆನ್ನಮ್ಮ ಕೋಂ ಲೇ.ರಾಮಕೃಷ್ಣೇಗೌಡ ರವರ ಹೆಸರಿಗೆ ಎಂಆರ್‌ಹೆಚ್.10/2014–15ರಂತೆ ಖಾತಾ ಬದಲಾವಣೆ ಮಾಡಲಾಗಿದೆ. ಸದರಿ ದಾಖಲೆಗಳನ್ವಯ ಶ್ರೀಮತಿ.ಚೆನ್ನಮ್ಮರವರು ದಿ:21/11/14ರಂದು ಸದರಿ ಜಮೀನುಗಳನ್ನು ಶ್ರೀ.ಎ.ಕೆ.ಗುರುಮೂರ್ತಿ ಬಿನ್ ಕರಿಯಪ್ಪ ರವರಿಗೆ ಮಾರಾಟ ಮಾಡಿದ್ದು, ನಂತರ ಭೂಮಿ, ಕಾವೇರಿ ತತ್ರಾಂಶದ ಮೂಲಕ ನೋಂದಣಿ ವಿವರ ತಾಲ್ಲೂಕ್ ಕಛೇರಿಯ ಭೂಮಿ ತತ್ರಾಂಶಕ್ಕೆ ಬಂದು ನಂತರ ಎಂಆರ್‌ಹೆಚ್.13/2014–15ರಂತೆ ನಮೂನೆ–21/12ನ್ನು ಸೃಷ್ಟಿಸಿ ಅಗತ್ಯ ಕ್ರಮಕ್ಕಾಗಿ ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಿಗರಿಗೆ ಕಳುಹಿಸಲಾಗಿ, ಕ್ರಯದಂತೆ ಶ್ರೀ.ಎ.ಕೆ.ಗುರುಮೂರ್ತಿರವರ ಹೆಸರಿಗೆ ಖಾತಾ ನಮೂದಿಸದಂತೆ ದೂರುದಾರರು ತಕರಾರು ಸಲ್ಲಿಸಿದ್ದು, ಈ ಬಗ್ಗೆ ತಮ್ಮ ಕಛೇರಿಯ ಪ್ರಕರಣ ಸಂಖ್ಯೆ: ಆರ್‌ಆರ್‌ಟಿ–ಡಿಐಎಸ್, ಸಿಆರ್ 167/14–15ರಂತೆ ವಿಚಾರಣೆ ನಡೆಯುತ್ತಿದ್ದು, ಇನ್ನು ಅಂತಿಮ ತೀರ್ಮಾನವಾಗಿಲ್ಲ. ಶಿವಮೊಗ್ಗ ಜಿಲ್ಲಾಧಿಕಾರಿಗಳ ಪ್ರಕರಣ ಸಂಖ್ಯೆ:ಆರ್‌ಎಂಐಎಸ್‌ಸಿ.17/14–15ರಂತೆ ತಡೆಯಾಜ್ಞೆ ತೆರವುಗೊಳಿಸಿ, ನಂತರ ಜಿಲ್ಲಾಧಿಕಾರಿಗಳು, ಶಿವಮೊಗ್ಗ ರವರ ಪತ್ರ ಸಂಖ್ಯೆ: ಆರ್‌ಎಂಐಎಸ್‌ಸಿ.17/14–15 ದಿ:27/08/15ರಂತೆ ಎಂಆರ್‌ಹೆಚ್.5/2014–15ರಂತೆ ದೂರುದಾರ ಹಾಗೂ ಅವರ ಕುಟುಂಬದ ಸದಸ್ಯರ ಹೆಸರಿಗೆ ಜಂಟಿಯಾಗಿ ನಮೂದಿಸಲು ನಿರ್ದೇಶನ ನೀಡಲಾಗಿದೆ. ಜಿಲ್ಲಾಧಿಕಾರಿಗಳ ಆದೇಶದಂತೆ, ದೂರುದಾರರ ಕುಟುಂಬದವರ ಹೆಸರನ್ನು ನಮೂದಿಸಲು ಹೋದಾಗ ಕ್ರಯ ನೋಂದಣಿ ತಕರಾರರು ಪ್ರಕರಣ ಆರ್‌ಆರ್‌ಟಿ–ಡಿಐಎಸ್, ಸಿಆರ್ 167/14–15ರ ಪ್ರಕರಣ ತಮ್ಮ

BD/114/16

ಕಛೇರಿಯಲ್ಲಿ ಬಾಕಿ ಇರುವವರಿಂದ, ಜಿಲ್ಲಾಧಿಕಾರಿಗಳ ಆದೇಶದಂತೆ ದೂರುದಾರರು ಹಾಗೂ ಅವರ ಕುಟುಂಬದವರ ಹೆಸರನ್ನು ದಾಖಲಿಸಲು ಸಾಧ್ಯವಾಗಿಲ್ಲವೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ದೂರುದಾರರ ತಂದೆ ಶ್ರೀ.ರಾಮಕೃಷ್ಣೇಗೌಡ ರವರು ದಿ:04/07/2011ರಂದು ಮರಣ ಹೊಂದಿದ್ದು, ಸದರಿ ಸ್ವತ್ತುಗಳನ್ನು ದೂರುದಾರರ ತಾಯಿ ಶ್ರೀಮತಿ.ಚೆನ್ನಮ್ಮ ರವರ ಹೆಸರಿಗೆ ಅಪರಿಚಿತ ವ್ಯಕ್ತಿಗಳು ಮಕ್ಕಳುಗಳಾದ ದೂರುದಾರ ಹಾಗೂ ದೂರುದಾರರ ಅಕ್ಕ ಶ್ರೀಮತಿ.ವೈ.ಆರ್.ಸುನೀತಾ, ಜಿಲ್ಲಾಧಿಕಾರಿಗಳ ಮಧ್ಯಂತರ ತಡೆಯಾಜ್ಞೆಯ ಆದೇಶವು ದಿ:24/11/14ರವರೆಗೆ ಚಾಲ್ತಿಯಲ್ಲಿರುತ್ತದೆಂದು ತಿಳಿಸಿದ್ದಾರೆ. ಸದರಿ ಪ್ರಕರಣವು ಇನ್ನೂ ಸಹ ಇತ್ಯರ್ಥವಾಗಿಲ್ಲ. ಆದರೆ, ಎದುರುದಾರರು ಸದರಿ ಮಧ್ಯಂತರ ಆದೇಶವನ್ನು ಸದರಿ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ನಮೂದಿಸಬೇಕಿದ್ದು, ಆದರೆ ಎದುರುದಾರರು ಕಾಲಂ ನಂ.11ರಲ್ಲಿ ನಮೂದು ಮಾಡುವ ಬದಲು ಕಾನೂನುಬಾಹಿರವಾಗಿ ಶ್ರೀಮತಿ.ಚೆನ್ನಮ್ಮ ರವರ ಹೆಸರಿಗೆ ಜಂಟಿ ಖಾತೆ ಮಾಡುವಂತೆ ಎಂಆರ್‌ಹೆಚ್.10/2014-15ರಂತೆ ಆದೇಶ ಮಾಡಿದ್ದಾರೆ. ಜಿಲ್ಲಾಧಿಕಾರಿಗಳ ಮಧ್ಯಂತರ ಆದೇಶ ದಿ:24/11/14ರವರೆಗೆ ಇದೆಯೆಂದು ತಿಳಿದು ದಿ:10/11/14ರಲ್ಲಿ ಯಾವುದೇ ಹಿರಿಯ ಅಧಿಕಾರಿಗಳ ಆದೇಶ ಇಲ್ಲದಿದ್ದರೂ, ಶ್ರೀಮತಿ.ಚೆನ್ನಮ್ಮ ರವರ ಹೆಸರಿಗೆ ಖಾತೆ ಮಾಡಿ, ದಿ:21/11/14ರಲ್ಲಿ ಸದರಿ ಸ್ವತ್ತನ್ನು ಶ್ರೀ.ಎ.ಕೆ.ಗುರುಮೂರ್ತಿ ಬಿನ್ ಕರಿಯಪ್ಪ ರವರಿಗೆ ಮಾರಾಟ ಮಾಡಲು ಸಹಾಯ ಮಾಡಿದ್ದಾರೆ. ಆ ನಂತರ, ಕ್ರಯದಾರರಾದ ಶ್ರೀ.ಎ.ಕೆ.ಗುರುಮೂರ್ತಿ ರವರ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ನಮೂದಿಸದಂತೆ ತಕರಾರು ಸಲ್ಲಿಸಿದ್ದು, ಈ ಬಗ್ಗೆ ಪ್ರಕರಣ ಸಂಖ್ಯೆ:ಆರ್‌ಆರ್‌ಟಿ.ಡಿಐಎಸ್.ಸಿಆರ್.167/14-15ರಂತೆ ವಿಚಾರಣೆ ನಡೆದಿದೆ. ಜಿಲ್ಲಾಧಿಕಾರಿಗಳ ಆದೇಶದಂತೆ, ತಡೆಯಾಜ್ಞೆಯನ್ನು ತೆಗೆಸಿ ಶ್ರೀಮತಿ.ಚೆನ್ನಮ್ಮ, ಶ್ರೀ.ವೈ.ಆರ್.ನರೇಂದ್ರ ಬಾಬು ಮತ್ತು ಶ್ರೀ.ವೈ.ಆರ್.ಸುನೀತಾ ರವರಿಗೆ ಜಂಟಿ ಖಾತೆ ದಾಖಲಿಸಲು ದಿ:24/12/15ರಂದು ತಮ್ಮ ಬಳಿ ಬಂದು ತಾನು ತಿಳಿದು ತಿಳಿದು ತಪ್ಪು ಮಾಡಿಲ್ಲ, ಗೊತ್ತಿಲ್ಲದೆ ತಪ್ಪಾಗಿದೆ, ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುವುದಾಗಿ ಹೇಳಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಎದುರುದಾರರು ಉಪವಿಭಾಗಾಧಿಕಾರಿಗಳಿಗೆ ಪತ್ರ ಬರೆದಿದ್ದು, ಪಹಣಿ ಪತ್ರಿಕೆಯಲ್ಲಿ ಜಿಲ್ಲಾಧಿಕಾರಿಗಳ ಆದೇಶವನ್ನು ನಮೂದಿಸುವ ಬಗ್ಗೆ ಅನುಮತಿ ಕೋರಿದ್ದು, ಉಪವಿಭಾಗಾಧಿಕಾರಿಗಳು ಸಹ ಜಿಲ್ಲಾಧಿಕಾರಿಗಳ ಆದೇಶದಂತೆ ಕ್ರಮ ಜರುಗಿಸಲು ತಿಳಿಸಿದ್ದಾರೆ. ಆದರೆ, ಜಿಲ್ಲಾಧಿಕಾರಿಗಳ ಆದೇಶದಲ್ಲಿ ಉಪವಿಭಾಗಾಧಿಕಾರಿಗಳ ಆದೇಶವನ್ನು ಮಾತ್ರ ತಡೆಹಿಡಿದಿದ್ದು, ಅಂತಿಮ ಆದೇಶವಾಗಿಲ್ಲ.

ಆದರೆ, ಎದುರುದಾರರು ಜಿಲ್ಲಾಧಿಕಾರಿಗಳ ತಡೆಯಾಜ್ಞೆ ಚಾಲ್ತಿಯಲ್ಲಿದ್ದರೂ ಸಹ ಶ್ರೀಮತಿ.ಚೆನ್ನಮ್ಮರವರ ಹೆಸರಿಗೆ ಖಾತಾ ಬದಲಾವಣೆ ಮಾಡಿ, ಸದರಿಯವರು ಸದರಿ ಆಸ್ತಿಗಳನ್ನು ಶ್ರೀ.ಗುರುಮೂರ್ತಿ ಬಿನ್ ಲೇ.ಕರಿಯಪ್ಪ ರವರ ಹೆಸರಿಗೆ ಮಾರಾಟ ಮಾಡಿದ್ದಾರೆ. ಸದರಿ ಆಸ್ತಿಗಳಲ್ಲಿ ದೂರುದಾರರಿಗೂ ಸಹ ಹಿಸ್ಸಾ ಹಕ್ಕು ಇದೆಯೋ ಅಥವಾ ಇಲ್ಲವ್ರೋ ಎಂದು ಸರಿಯಾದ ರೀತಿ ಪರಿಶೀಲನೆ ಮಾಡದೇ, ಎದುರುದಾರರು ಜಿಲ್ಲಾಧಿಕಾರಿಗಳ ಆರ್‌ಎಂಐಎಸ್‌ಸಿ.17/2014–15ರಲ್ಲಿ ತಡೆಯಾಜ್ಞೆ ದಿ:24/11/14ರವರೆಗೆ ಚಾಲ್ತಿಯಲ್ಲಿದ್ದರೂ ಸಹ ಎದುರುದಾರರು ದಿ:10/11/14ರಂದು ಶ್ರೀಮತಿ.ಚೆನ್ನಮ್ಮರವರ ಹೆಸರಿಗೆ ಖಾತಾ ಬದಲಾವಣೆ ಮಾಡಿ, ಜಿಲ್ಲಾಧಿಕಾರಿಗಳ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಮತ್ತು ದಾಖಲೆಗಳನ್ನು ಶ್ರೀಮತಿ.ಚೆನ್ನಮ್ಮರವರ ಹೆಸರಿಗೆ ಸೃಷ್ಟಿಸಿ, ಮಾರಾಟ ಮಾಡಲು ಸಹಕಾರ ನೀಡಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

7. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

8. ಅದಲ್ಲದೆ, ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

BD/114/16

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 20/10/16.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
ಉಪಲೋಕಾಯುಕ್ತ-2,
**ಕರ್ನಾಟಕ ರಾಜ್ಯ.**